

# ಅಂದ ಇಮ್ಮಡಿಸುವ ಆ್ಯಂಟಿಕ್ ಹಾರ

**ಅಮೂಲ್ಯವಾದ ಹರಳುಗಳು, ದೇವರ ವಿಗ್ರಹವಿರುವ ಪದಕಗಳು, ಕುಸುರಿ ಕೆಲಸ ಮಾಡಿದ ಗುಂಡುಗಳನ್ನು ಹೊಂದಿರುವ ಹಳೆಯ ವಿನ್ಯಾಸದ ಚಿನ್ನದ ಹಾರಗಳಿಗೆ ಈಗ ಬೇಡಿಕೆ ಜಾಸ್ತಿ. ಇವು ವಧುವಿಗೆ ಮಾತ್ರ ಸೀಮಿತವಾಗಿಲ್ಲ, ಬೇರೆ ಮಹಿಳೆಯರೂ ಧರಿಸಿ ಖುಷಿಪಡಬಹುದು.**

■ **ಎಸ್. ಹೆಗಡೆ**



ಚಿನ್ನದ ಒಡವೆಗಳೆಂದರೇ ಚಿತ್ತಾಕರ್ಷಕ; ನಿತ್ಯ ನೂತನವೆನಿಸುವಂತಹ ಅಮೂಲ್ಯ ಕಲಾಕೃತಿಗಳು. ಅದರಲ್ಲೂ ಹಳೆಯ ಮಾದರಿ ಆಭರಣಗಳಾದರಂತೂ ಕಣ್ಮನವನ್ನು ಸೂಜಿಗಲ್ಲಿನಂತೆ ಸೆಳೆಯುತ್ತವೆ. ಇತ್ತೀಚಿನ ದಿನಗಳಲ್ಲಿ ಈ ಹಳೆಯ ಮಾದರಿಯ ಅಥವಾ ಆಭರಣ ಪ್ರಿಯರ ಬಾಯಲ್ಲಿ ನಲಿದಾಡುವಂತೆ ‘ಆ್ಯಂಟಿಕ್’ ಒಡವೆಗಳು ದಾಂಪತ್ಯದ ಹೊಂಗನಸು ಕಾಣುತ್ತಿರುವ ವಧುಗಳ ಆಸಕ್ತಿ ಕೆರಳುವಂತೆ ಮಾಡಿಬಿಟ್ಟಿವೆ. ಕುಶಲಕರ್ಮಿಗಳ ನುರಿತ ಕೈಗಳಲ್ಲಿ ಅರಳಿದ ಕುಸುರಿ ಕಲೆಯಿಂದ, ಹುದುಗಿಸಿಟ್ಟ ಮೋಹಕ ಅಮೂಲ್ಯ, ಅರೆ ಅಮೂಲ್ಯ ಹರಳುಗಳಿಂದ ಮಿನುಗುವ ಇವು ಗತಕಾಲದ ವೈಭವವನ್ನು ಮರಳಿ ತಂದಂತೆ ಪುಳಕ ಮೂಡಿಸುತ್ತವೆ; ಮಧುರ ಭಾವನೆಗಳ ಅಲೆಗಳನ್ನೇಳಿಸುತ್ತವೆ.

ಇವು ಹಳೆಯ ಮಾದರಿ ಒಡವೆಗಳಷ್ಟೇ ಹೊರತು ತಲೆಮಾರುಗಳಿಂದ ಬಂದ ಹಳೆಯ ಆಭರಣಗಳಲ್ಲ. ಅಂದರೆ ಹಿಂದಿನ ಕಾಲದ ಆಭರಣಗಳ ವಿನ್ಯಾಸವನ್ನು ನಕಲು ಮಾಡಿ ತಯಾರಿಸಲಾಗುವುದು. ಕೆಲವೊಮ್ಮೆ ಅವುಗಳಿಗೆ ಅಲ್ಪ ಪ್ರಮಾಣದಲ್ಲಿ ಆಧುನಿಕ ಸ್ಪರ್ಶ ನೀಡಿ ಇನ್ನಷ್ಟು ಯುವತಿಯರ, ಮಹಿಳೆಯರ ಕಣ್ಸೆಳೆಯುವಂತೆ ಮಾಡಲಾಗುವುದು. ದೇವಾಲಯ ಒಡವೆಗಳ ವಿನ್ಯಾಸ ಕೂಡ ಹಳೆಯ ಮಾದರಿಗೇ ಸೇರಿದೆ.

ಈ ಹಳೆಯ ವಿನ್ಯಾಸದ ಆಭರಣಗಳಲ್ಲಿ ಸದ್ಯ ಚಾಲ್ತಿಯಲ್ಲಿರುವಂತಹದ್ದು ಪದಕವಿರುವ ಹಾರಗಳು. ಇವುಗಳನ್ನು ಸಾಮಾನ್ಯವಾಗಿ ಲಕ್ಷ್ಮಿ, ಗಣಪತಿ ಮೊದಲಾದ ದೇವರ, ವಿವಿಧ ಹೂವುಗಳ ವಿನ್ಯಾಸದಲ್ಲಿ ತಯಾರಿಸಿ ರುತ್ತಾರೆ. ಇವುಗಳಿಗೆ ಅಮೂಲ್ಯವಾದ ರತ್ನಗಳು, ಮುತ್ತು ಮೊದಲಾದವುಗಳನ್ನು ಜೋಡಿಸಿ ಕಣ್ಸೆಳೆಯುವಂತೆ ಮಾಡುವ ಕಲೆ ನಮ್ಮ ಆಭರಣ ವಿನ್ಯಾಸಗಾರರಿಗೆ ಕರಗತವಾಗಿಬಿಟ್ಟಿದೆ. ಲಾಗಾಯ್ತಿನಿಂದಲೂ ವಜ್ರ, ಪಚ್ಚೆ (ಎಮರಾಲ್ಡ್), ನೀಲ (ಸಫೈರ್) ಹಾಗೂ ಮಾಣಿಕ್ಯ (ರೂಬಿ)ದಂತಹ ಅಮೂಲ್ಯ ಹರಳುಗಳು, ಟೋಪಾಜ್, ಅಕ್ವಾಮರೈನ್‌ನಂತಹ ಅರೆ ಅಮೂಲ್ಯ ಹರಳುಗಳು, ಗಾರ್ನೆಟ್, ಓನಿಕ್ಸ್ ಮಣಿಗಳು ಈ ಹಾರಗಳಲ್ಲಿ ಅಂದವಾಗಿ ಕೂತು ಇನ್ನಷ್ಟು ಮೋಡಿ ಮಾಡುತ್ತಿವೆ. ಈ ಹರಳುಗಳು ಕೆಲವು ಸಮುದಾಯಗಳಲ್ಲಿ ಶುಭಸೂಚಕ, ಮಂಗಲಕರ ಎಂಬ ಭಾವನೆ ಈಗಲೂ ಇದೆ.

ಈ ಹಳೆಯ ವಿನ್ಯಾಸದ ಹಾರಗಳಲ್ಲಿ ಚಿನ್ನದ ಜೊತೆ ಬೆಳ್ಳಿಯನ್ನೂ ಬಳಸುವ ಸಂಪ್ರದಾಯವಿದೆ. ಅಗಲವಾದ, ಭಾರವಾದ ಪದಕಗಳ ಹಿಂಭಾಗ ಕೆಲವೊಮ್ಮೆ ಬೆಳ್ಳಿಯ ತೆಳ್ಳನೆಯ ತಗಡನ್ನು ಲಗತ್ತಿಸಲಾಗುವುದು. ತೆಳ್ಳನೆಯ ಚಿನ್ನದ ತಗಡಿನಿಂದ ಪದಕಗಳು ನಜ್ಜುಗುಜ್ಜಾಗದಿರಲು ಈ ಕ್ರಮ ಎನ್ನುತ್ತಾರೆ ಆಭರಣ ತಯಾರಕರು. ಈ ಚಿನ್ನದ ವರ್ಣವೂ ಅಷ್ಟೆ. ಮಾಮೂಲು ಹಳದಿ ಶೇಡ್ ಬದಲು ಕೆಂಪು ಶೇಡ್ ಬರುವಂತೆ ಮಾಡುತ್ತಾರೆ. ಇದರಿಂದ ಆ್ಯಂಟಿಕ್ ಮಿಂಚು ನಿಚ್ಚಳವಾಗಿ ಗೋಚರಿಸುತ್ತದೆ. ಇನ್ನು ಕೆಲವು ಆಭರಣಗಳಿಗೆ ಕಂದು ಶೇಡ್ ಕೊಡುವ ಪದ್ಧತಿಯೂ ಇದೆ. ಈ ವಿವಿಧ ರಂಗಿಗೆ ಕಾರಣ ಚಿನ್ನದ ಜೊತೆ ಮಿಶ್ರ ಮಾಡುವ ಬೇರೆ ಬೇರೆ ಲೋಹಗಳು ಎನ್ನುತ್ತಾರೆ ಆಭರಣ ವಿನ್ಯಾಸಗಾರರು. ಅಪರಂಜಿ ಚಿನ್ನ ಅಂದರೆ 24 ಕ್ಯಾರಟ್‌ನ ಚಿನ್ನ ತೀರಾ ಮೆದು. ಹೇಗೆಂದರೆ ಹಾಗೆ ಬಾಗುತ್ತದೆ. ಹೀಗಾಗಿ ನೇರವಾಗಿ ಆಭರಣ ತಯಾರಿಕೆಗೆ ಬಳಕೆಯಾಗುವುದಿಲ್ಲ. ಇದಕ್ಕೆ ತಾಮ್ರವನ್ನು ಸೇರಿಸಿ ಆಭರಣ ತಯಾರಿಸಿದರೆ ಗಟ್ಟಿಯಾಗಿ ಬಾಳಿಕೆ ಬರುತ್ತದೆ. ಇದರಿಂದ ಕೆಂಪು ಶೇಡ್ ಬರುತ್ತದೆ. ಹಿತ್ತಾಳೆ